ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಅಂದಾಜನ್ನು ಆದಷ್ಟು ಜಾಗ್ರತೆ ಮಂಜೂರುಮಾಡಿ ಕೆಲಸ ಪ್ರಾರಂಭಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅಂದಮೇಲೆ ಇದು ಎಷ್ಟು ಕೋಟಿ ರೂಪಾಯಿಗಳ ಅಂದಾಜು ?

ಶ್ರೀ ವೀರೇಂದ್ರಪಾಟೀಲ್.—ಬಹುಶಃ 75,251 ರೂಪಾಯಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಕಡಮೆ ಹಣದ ಅಂದಾಜನ್ನು ತಯಾರುಮಾಡಿ ಅದರ ಬಗ್ಗೆ ಚೆಕ್ನಿಕಲ್ ಒಪಿನಿಯರ್ ಕೊಡುವುದಕ್ಕೆ ಇನ್ನೆಷ್ಟುಕಾಲಬೇಕು ? ಮತ್ತೆ ಚೆಕ್ನಿಕಲ್ ಸ್ಯಾಂಕ್ಷನ್ ಕೊಡುವುದಕ್ಕೆಷ್ಟುಕಾಲ ಬೇಕು ? ಈಗಲಾದರೂ ಆಬಗ್ಗೆ ಚೆಕ್ನಿಕಲ್ ಒಪಿನಿಯರ್ ಪಡೆದಿದ್ದರೆ, ಈ ಅಂದಾಜನ್ನು ಜಾಗ್ರತೆ ಮಂಜೂರು ಮಾಡಿ ಆ ಕೆಲಸವನ್ನು ಪ್ರಾರಂಭಮಾಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಅದಕ್ಕೋಸ್ಕರವೇ ಹಿಂದೆ ನಾನು ಆರೀತಿ ಹೇಳಿದ್ದು. ಆದಷ್ಟು ತೀವ್ರವಾಗಿ ಅದನ್ನು ಮಾಡುತ್ತೇವೆಂದು ನಾನು ಈಗಾಗಲೇ ಆಶ್ವಾಸನೆಯನ್ನು ಕೊಟ್ಟಿದ್ದೇನೆ.

Sri ANNA RAO GANAMUKHI.—May I know whether this foundation stone was laid by the Minister after taking a decision to construct the bridge although the estimate was not prepared ?

Sri VEERENDRA PATIL.—That is why I told that there was a proposal to construct a bridge. That has been included in the programme. Government is receiving the estimates and after sanctioning the estimate, work will be commenced.

---

## Use of Government Vehicles by the Ministers in connection with the 1962 General Elections.

*Q.—70. Sri E. NARAYANA GOWDA (Bangarpet).—

Will the Government be pleased to state :—

(*a*) whether it is a fact that they had issued orders, that the Ministers should not use Government vehicles for the election propaganda in connection with the 1962 General Elections and if so, when the said order was issued;

(*b*) whether they have received any complaints either from the public or from the candidates themselves against any Minister violating the said order ;

(*c*) if so, the action taken in this respect ?

*A.—Sri S. R. KANTHI (Chief Minister).—

(*a*) Yes, on 3rd January, 1962.

(*b*) No.

(*c*) Does not arise.

ಶ್ರೀ ಇ. ನಾರಾಯಣಗೌಡ.—1962ನೇ ಜನವರಿ 3 ರಂದು ಆಜ್ಞೆ ಹೊರಡಿಸಿದೆ ಎಂದು ಹೇಳಿದ್ದೀರಿ. ಜನವರಿ ಮೂರನೇ ತಾರೀಖು ಆದಮೇಲೆ ಆ ಕಾರುಗಳು ಮಂತ್ರಿಗಳ ವಶದಲ್ಲಿದ್ದವೇ ಅಥವಾ ಷೆಡ್‌ನಲ್ಲಿ ಇದ್ದವೇ ?

†ಶ್ರೀ ಎಸ್. ಆರ್. ಕಂಠಿ.—ಜನವರಿ 3ನೇ ತಾರೀಖಿನ ದಿವಸ ಮಂತ್ರಿಗಳ ಹತ್ತಿರವೇ ಇದ್ದುವು ಜನವರಿ 13ನೇ ತಾರೀಖಿನಿಂದ ಮಂತ್ರಿಗಳು ಸರ್ಕಾರಿ ಕಾರನ್ನು ಉಪಯೋಗಿಸಬಾರದು ಎಂದು ಆಜ್ಞೆಇದೆ.

ಶ್ರೀ ಇ. ನಾರಾಯಣಗೌಡ.—3ನೇ ತಾರೀಖು ಆದಮೇಲೆ ಮಂತ್ರಿಗಳು ಈ ಕಾರುಗಳನ್ನು ಯಾವು ದಾದರೂ ಕ್ಷೇತ್ರಕ್ಕೆ ತೆಗೆದುಕೊಂಡುಹೋಗಿದ್ದರೇ ಅಥವಾ ಷೆಡ್‌ಗಳಲ್ಲೇ ಬಿಟ್ಟಿದ್ದರೇ ?

ಶ್ರೀ ಎಸ್. ಆರ್. ಕಂಠಿ.—13ನೇ ತಾರೀಖಿನ ನಂತರ ಈ ಕಾರುಗಳನ್ನು ತೆಗೆದುಕೊಂಡು ಹೋಗ ಬಾರದು ಎಂದು ಇತ್ತು. ಆರೀತಿ ಆದಿನದ ನಂತರ ತೆಗೆದುಕೊಂಡುಹೋದಂಥ ಸಮಾಚಾರ ಸರ್ಕಾರದವ ರಲ್ಲಿ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—13ನೇ ತಾರೀಖಿನ ನಂತರ ಈ ಕಾರುಗಳು ಷೆಡ್‌ನಲ್ಲಿ ಇದ್ದುವೇ ಅಥವಾ ಮಂತ್ರಿಗಳು ಯಾವುದಾದರೂ ಕ್ಷೇತ್ರದಲ್ಲಿ ಉಪಯೋಗಿ ಸಿದರೇ ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

Mr. SPEAKER.—What is this 13th. I find in the answer the date being given as 3rd.

Sri S. R. KANTHI.—The notification is dated 3rd January 1962. Actually in the very notification itself it is stated that from 13th January onwards, no Minister or Deputy Minister can use Government cars.

ಶ್ರೀ ಇ. ನಾರಾಯಣಗೌಡ.—ಸರ್ಕಾರಿ ಕೆಲಸದ ಮೇಲೆ ಆದರೂ ಕೂಡ ಈ ಕಾರುಗಳನ್ನು ಉಪ ಯೋಗಿಸಬಾರದು ಎಂದು ಆಜ್ಞೆ ಆಗಿತ್ತೇ ?

ಶ್ರೀ ಎಸ್. ಆರ್. ಕಂಠಿ.—13ನೇ ಜನವರಿಯಿಂದ ಸರ್ಕಾರಿ ಕೆಲಸಕ್ಕೂ ತೆಗೆದುಕೊಂಡುಹೋಗಬಾರದು ಎಂದು ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರಿ ಆರ್ಡರ್ ಏನಿತ್ತೋ, ಅದು ಬರೀ ಕಾಗದದಮೇಲೆ ಇತ್ತೇಹೊರತು ಕೆಲವು ಮಂತ್ರಿಗಳು ತಮ್ಮ ಕಾರನ್ನು ಕೆಲವು ಕ್ಷೇತ್ರ ಗಳಿಗೆ 13ನೇ ತಾರೀಖು ಆದಮೇಲೂ ತೆಗೆದುಕೊಂಡು ಹೋಗಿದ್ದರು ಎಂದು ಮೈಸೂರು ಸಂಸ್ಥಾನದ ಮುಖ್ಯ ಕಾರ್ಯದರ್ಶಿಗಳಿಗೆ ವರ್ತಮಾನ ಬಂದಿದೆಯಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅದು ಕಾಗದದ ಮೇಲೆ ಇತ್ತೋ; ಕಾರ್ಯತಃ ಇತ್ತೋ ಅಂತೂ ಸರ್ಕಾರಕ್ಕೆ ಆ ತರಹದ ದೂರು ಏನೂ ಬಂದಿಲ್ಲ.

ಶ್ರೀಮತಿ ಸುಶೀಲಾಬಾಯಿ ಶಹಾ.—ಈ ಕಾರುಗಳನ್ನು ಎಲೆಕ್ಷ್ಷನ್ ದೆಶೆಯಿಂದ ಉಪಯೋಗಿಸಬಾರದು ಎಂದು ಇತ್ತೀಚೆ; ಸರ್ಕಾರಿ ಅರ್ಜೆಂಟ್ ಕೆಲಸ ಬಂದರೂ ಕಾರನ್ನು ಒಯ್ಯಬಾರದು, ಉಪಯೋಗಿಸಬಾರದು ಎಂದು ಇತ್ತೀಚೆ ?

ಶ್ರೀ ಎಸ್. ಆರ್. ಕಂಠಿ.—ಎಲೆಕ್ಷ್ಷನ್ ಮಧ್ಯೇ ಯಾವುದಾದರೂ ಕೆಲಸ ಬಂದರೂ ಕೂಡ ಅದನ್ನು ಸರ್ಕಾರಿ ಕೆಲಸ ಎಂದು ತಿಳಿದುಕೊಳ್ಳಬೆ, ಕಾರು ಒಯ್ಯಬಾರದು ಎಂದು ಆಜ್ಞೆ ಇತ್ತು.

Sri ANNA RAO GANAMUKHI.—Is it not a fact that the notification asked the Ministers not to tour in Government vehicles after the 13th January but they were entitled to use Government cars within Bangalore on official duty ?

Sri S. R. KANTHI.—Yes, Sir.

ಶ್ರೀ ಎಸ್. ಎಂ. ಕೃಷ್ಣ.—ತಮ್ಮ ಉತ್ತರದಲ್ಲಿ 13ನೇ ತಾರೀಖು ಆದನಂತರ ಸರ್ಕಾರಿ ಕಾರನ್ನು ಉಪಯೋಗಿಸಬಾರದು ಎಂದು ಇದೆ ಎಂದು ಹೇಳಿದಿರಿ, ಅದು ಸರ್ಕಾರಿ ಲಾರಿಗಳಿಗೆ ಅನ್ವಯಿಸುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರಿ ಲಾರಿಯನ್ನು ಯಾವ ಮಂತ್ರಿಗಳು ಎಲ್ಲಿ ಉಪಯೋಗಿಸುತ್ತಾರೋ ಗೊತ್ತಿಲ್ಲ. ಅದು ಹೇಗೆ ಇದಕ್ಕೆ ಅನ್ವಯಿಸುತ್ತದೆ ?

ಶ್ರೀ ಎಸ್. ಎಂ. ಕೃಷ್ಣ.—ಜನರನ್ನು ಸಾಗಿಸುವುದಕ್ಕೆ !

ಶ್ರೀ ಎಸ್. ಆರ್. ಕಂಠಿ.—ಮಿನಿಸ್ಟರುಗಳು ಮತ್ತು ಡೆಪ್ಯೂಟಿ ಮಿನಿಸ್ಟರುಗಳು ಜನರನ್ನು ಸಾಗಿಸಲು ಲಾರಿ ಉಪಯೋಗಿಸುತ್ತಿದ್ದರು ಎನ್ನುವುದು ಬೇರೆ ಪ್ರಶ್ನೆ ಆಯಿತು. ಇದರಲ್ಲಿ ಬರುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ಬೆಂಗಳೂರು ಸಿಟಿಯಲ್ಲಿ ಉಪಯೋಗಿಸಬಹುದು, ಹೊರಗಡೆ ಹೋಗಬಾರದು ಎಂದು ಹೇಳಿದರೆ ಬೆಂಗಳೂರು ಸಿಟಿಯಲ್ಲೂ ಕೂಡ 8 ಕಾರ್ಪೊರೇಷನ್‌ಸಿಗಳಲ್ಲಿ ಎಲೆಕ್ಷ್ಷನ್ ನಡೆಯುತ್ತ ಇದ್ದುದು ಗೊತ್ತಿರಲಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಎಲೆಕ್ಷ್ಷನ್ ಕೆಲಸದಮೇಲೆ ತೆಗೆದುಕೊಂಡುಹೋಗಬಾರದು ಎಂದು ಇದೆ. ಅಫಿಷಿಯಲ್ ಡ್ಯೂಟಿಯ ಮೇಲೆ ಹೋಗಿದ್ದರೆ ಎಲೆಕ್ಷ್ಷನ್‌ಗೇ ಹೋಗಿದ್ದರು ಎಂದು ಹೇಗೆ ಆಗುತ್ತದೆ ?

---

## Sanctioning of Rural Housing Scheme for Tiptur Taluk.

*Q.—78. Sri K. P. REVANNA SIDDAPPA (Tiptur).—

Will the Government be pleased to state:—

(*a*) whether they have sanctioned Rural Housing Scheme to Tiptur Taluk;

(*b*) if so, the number of houses for which loan has been sanctioned under the Scheme in the said Taluk ?

*A.*—Sri M. V. RAMA RAO (Minister for Development, Law and Labour).—

(*a*) No.

(*b*) Does not arise in view of the reply to (*a*) above.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂಜೂರು ಮಾಡಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ?

†ಶ್ರೀ ಎಂ. ವಿ. ರಾಮರಾವ್.—ಉತ್ತರದಲ್ಲಿ ಕಾರಣವನ್ನು ಕೊಟ್ಟಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಲ್ಲೂ ಇಲ್ಲ. ಮಂಜೂರುಮಾಡಿಲ್ಲ ಎಂದು ಮಾತ್ರ ಹೇಳುತ್ತೀರಿ.

ಶ್ರೀ ಎಂ. ವಿ. ರಾಮರಾವ್.—ಸ್ವಾಮಿ ಈ ರೂರಲ್ ಹೌಸಿಂಗ್ ಸ್ಕೀಂ ಎನ್ನುವುದು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ ಇರತಕ್ಕ ಪ್ರದೇಶಗಳಲ್ಲಿ ಮಾತ್ರ ಜಾರಿಯಲ್ಲಿ ತರುವಂಥಾ ಸ್ಕೀಂ ಆಗಿದೆ. ತಿಪಟೂರು ತಾಲ್ಲೂಕು ಆ ಬ್ಲಾಕ್ ಅಲ್ಲ, ಆದ್ದರಿಂದ ಅಲ್ಲಿ ಈ ಸ್ಕೀಂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ ಅಲ್ಲದೇ ಇದ್ದ ಮಾತ್ರಕ್ಕೆ ಅಲ್ಲಿ ಜನಗಳೇ ಇಲ್ಲ ; ಅವರು ಬಡವರೇ ಅಲ್ಲ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಂ. ವಿ. ರಾಮರಾವ್.—ಅಂಥಾ ಅಭಿಪ್ರಾಯವೇನೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲೂ ಬಡವರು ಇದ್ದಾರೆ, ಜನರು ಇದ್ದಾರೆ, ಮನೆಗಳನ್ನು ಕೊಡಬೇಕೆನ್ನುವುದು ಸರ್ಕಾರದ ಧ್ಯೇಯವಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಸರ್ಕಾರದ ಧ್ಯೇಯ ಈ ಹೌಸಿಂಗ್ ಸ್ಕೀಂಗೆ ಸಂಬಂಧಪಟ್ಟಂತೆ ಏನು ಇದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅವರು ತಿಳಿದುಕೊಂಡಿರುವುದರಿಂದಲೇ ಈ ಪ್ರಶ್ನೆಯನ್ನು ಹಾಕಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಾಮಾನ್ಯ ಜನರು ಬಡಜನರಿಗೆ ಅನುಕೂಲವಾಗಬೇಕೆಂದು ಈ ರೂರಲ್ ಹೌಸಿಂಗ್ ಸ್ಕೀಂ ಇದೆ. ತಿಪಟೂರು ತಾಲ್ಲೂಕಿನಲ್ಲೂ ಬಡಜನರು ಇದ್ದಾರೆ. ಆದ್ದರಿಂದ ಈ ಸ್ಕೀಂನ್ನು ಅಲ್ಲಿ ಜಾರಿಗೆ ಕೊಡಬೇಕೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ರಾಮರಾವ್.—ಬಡಜನರು ಮೈನೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಇದ್ದಾರೊ ಅಲ್ಲೆಲ್ಲ ಈ ಸ್ಕೀಂನ್ನು ಜಾರಿಗೆ ತರಲು ಸರ್ಕಾರದವರು ಸಕಾಲದಲ್ಲಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ವಿಷಯದಲ್ಲಿ ಅನುಮಾನವೇ ಇಲ್ಲ.

Sri GANJI VEERAPPA.—What is the total amount of loan that an individual is entitled to receive under the scheme ?

Sri M. V. RAMA RAO.—I would like to have notice of that question.

Sri H. R. KESHAVA MURTHY.—Contrary to the statement of the Minister, is it not a fact that the scheme has been introduced even in places where there are no N.E.S. blocks ?

Sri M. V. RAMA RAO.—No, Sir.

ಶ್ರೀಮತಿ ಬನವರಾಜೇಶ್ವರಿ.—ಈ ಮನೆಗಳಿಗೆ ಮ್ಯಾಕ್ಸಿಮಂ ಮತ್ತು ಮಿನಿಮಂ amount ಎಷ್ಟು ಕೊಡುತ್ತೀರಿ ?

ಶ್ರೀ ಎಂ. ವಿ. ರಾಮರಾವ್.—ಬೇರೆ ಪ್ರಶ್ನೆ ಹಾಕಿದರೆ ತಿಳಿದು ಹೇಳಬಹುದು.